ದಿನಾಂಕ: ಫೆಬ್ರವರಿ 22, 2014

# ಭಾರತೀಯ ಸಂವಿಧಾನದ ರಚನೆ

-ಅರುಣ್ ಜೇಟ್ಲಿ
ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಫೆಬ್ರವರಿ 20, 2014ರಂದು ತನ್ನ ನಿವೃತ್ತ ಸದಸ್ಯರ ಬೀಳ್ಕೊಡುಗೆ ಸಮಾರಂಭವನ್ನು ರಾಜ್ಯ ಸಭಾ ಆಯೋಜಿಸಿತ್ತು. ಸಾಮಾನ್ಯ ಶಿಷ್ಟಾಚಾರದೊಂದಿಗೆ, ಬೀಳ್ಕೊಡುಗೆ ಸಮಾರಂಭದಲ್ಲಿ ಒಂದು ವಿಶೇಷತೆಯಿತ್ತು. ಭಾರತದ ಸಂವಿಧಾನ ರಚನಾ ಪ್ರಕ್ರಿಯೆ ಕುರಿತ 'ಸಂವಿಧಾನ' ಎಂಬ ಶೀರ್ಷಿಕೆಯ ಧಾರಾವಾಹಿಯ ಆಯ್ದ ಭಾಗಗಳನ್ನು ಬಿತ್ತರಿಸಲಾಗಿತ್ತು. ಈ ಧಾರವಾಹಿಯನ್ನು ರಾಜ್ಯ ಸಭಾ ಟಿವಿಗಾಗಿ ಉತ್ಪಾದಿಸಲಾಗಿದ್ದು, ರಾಜ್ಯ ಸಭಾ ಸೆಕ್ರೆಟೇರಿಯಟ್ ಇದಕ್ಕೆ ನೆರವು ಒದಗಿಸಿದೆ.

ಭಾರತದ ಸಮಕಾಲೀನ ಮಹಾನ್ ಚಿತ್ರನಿರ್ದೇಶಕರಲ್ಲಿ ಒಬ್ಬರಾದ ಶ್ಯಾಮ್ ಬೆನಗಲ್ ದಾರಾವಾಹಿ ನಿರ್ದೇಶಿಸಿದ್ದಾರೆ. ರಾಜ್ಯ ಸಭಾ ನಾಮಾಂಕಿತ ಸದಸ್ಯರಾಗಿ ಶ್ಯಾಮ್ ಬೆನೆಗಲ್ ಆರು ವರ್ಷಗಳು ನಮ್ಮ ಸದನದ ಸದಸ್ಯರಾಗಿದ್ದವರು. ಸಿನೆಮಾ ಮತ್ತು ರಂಗಭೂಮಿಯ ಖ್ಯಾತ ಕಲಾವಿದರು ಧಾರಾವಾಹಿಯಲ್ಲಿ ನಟಿಸಿದ್ದಾರೆ. ಧಾರಾವಾಹಿಯನ್ನು 10 ಭಾಗಗಳಲ್ಲಿ ವಿಂಗಡಿಸಲಾಗಿದ್ದು, ಆರಂಭದಲ್ಲಿ ರಾಜ್ಯ ಸಭಾ ಟಿವಿ ಇದನ್ನು ಬಿತ್ತರಿಸಲಿದೆ. ಪ್ರತಿಯೊಂದು ಭಾಗದ ಅವಧಿ ಒಂದು ಗಂಟೆಯದ್ದಾಗಿದೆ. ಧಾರಾವಾಹಿಗಾಗಿ, ಸಂಸತ್‌ನ ಕೇಂದ್ರೀಯ ಸಭಾಂಗಣದ ಪ್ರತಿರೂಪವನ್ನು ಮುಂಬೈ ಸ್ಟೂಡಿಯೋದಲ್ಲಿ ನಿರ್ಮಿಸಲಾಗಿದೆ. ಕೇಂದ್ರೀಯ ಸಭಾಂಗಣವನ್ನು ಸಂಪೂರ್ಣ ಹೋಲಿಕೆ ಪ್ರತಿರೂಪಕ್ಕಿದೆ. ಒಳ ವಿನ್ಯಾಸ, ಭಾವಚಿತ್ರಗಳ ಅನಾವರಣ, ಮುಖ್ಯ ವೇದಿಕೆ, ಕೇಂದ್ರೀಯ ಸಭಾಂಗಣದ ವಿಚಿತ್ರ ಫ್ಯಾನುಗಳು ಎಲ್ಲವೂ ಇವೆ. ಶಾಸನಸಭೆಯ ಅಧ್ಯಕ್ಷರಾದ ಡಾ.ರಾಜೇಂದ್ರ ಪ್ರಸಾದ್, ಕರಡು ಸಮಿತಿಯ ಅಧ್ಯಕ್ಷರಾದ ಡಾ.ಬಿ.ಆರ್.ಅಂಬೇಡ್ಕರ್, ಜವಹರ್‌ಲಾಲ್ ನೆಹರು, ಸರ್ದಾರ್ ಪಟೇಲ್, ಮೊಹಮದ್ ಅಲಿ ಜಿನ್ನಾ, ಗೋವಿಂದ್ ಬಲಭ್ಭ ಪಂತ್, ರಾಜಕುಮಾರಿ ಅಮೃತ್ ಕೌರ್, ಮೌಲಾನ ಅಬ್ದುಲ್ ಕಲಾಂ ಅಜಾದ್, ಎನ್.ಗೊಪಾಲಸ್ವಾಮಿ ಅಯ್ಯಂಗಾರ್ ಮತ್ತು ಇತರರನ್ನು ಹೋಲುವ ಕಲಾವಿದರಿದ್ದಾರೆ. ಶಾಸನಸಭೆಯ ಚರ್ಚೆಗಳ ದಾಖಲೆಗಳನ್ನು ಆಧರಿಸಿ ಕಲಾವಿದರ ಸಂಭಾಶಣೆಗಳನ್ನು,ಭಾಷಣಗಳನ್ನು ಮತ್ತು ವಿಚಾರಗಳನ್ನು ತಿಳಿಸಲಾಗಿದೆ.

ಧಾರಾವಾಹಿಯ ಕೆಲವು ಭಾಗವನ್ನು ವೀಕ್ಷಿಸಿದ ನಾನು ಪೂರ್ಣ ಧಾರಾವಾಹಿಯನ್ನು ನೋಡುವ ಉತ್ಸುಕತೆಯಲ್ಲಿದ್ದು, ಭಾರತೀಯ ಸಂವಿಧಾನ ಸಿದ್ಧಪಡಿಸುವ ರೋಚಕ ವೃತ್ತಾಂತವು ಟಿವಿ ಪರದೆಯ ಮೇಲೆ ಮೂಡಿ ಬರಲಿದೆ ಎಂದು ನಿಸ್ಸಂದೇಹವಾಗಿ ಹೇಳಬಲ್ಲೆ. ಪುಸ್ತಕಕ್ಕಿಂತ ಟಿವಿ ಪರದೆಯ ಮೇಲೆ ಕಥನ ಯಥಾವತ್ತಾಗಿ ತೆರೆದುಕೊಂಡಾಗ ಅದರ ಸಾರ ಅಸ್ವಾದಿಸುವ ಅನುಭವವೇ ಬೇರೆಯಾಗುತ್ತದೆ. ರಾಜ್ಯ ಸಭಾ ಚಿತ್ರೀಕರಣದ ಸಂಪೂರ್ಣ ವೆಚ್ಚ ಭರಿಸಿರುವುದರಿಂದ ಲಾಭಗಳಿಸುವ ಉದ್ದೇಶ ಇದರಲ್ಲಿ ಇಲ್ಲವಾದ್ದರಿಂದ, ರಾಜ್ಯ ಸಭಾ ಟಿವಿಯಲ್ಲಿ ಪ್ರಸಾರವಾದ ನಂತರ ಧಾರಾವಾಹಿಯನ್ನು ದೂರದರ್ಶನ ಮತ್ತು ಖಾಸಗಿ ವಾಹಿನಿಗಳು ಸೇರಿದಂತೆ ಅನ್ಯ ಮಾಧ್ಯಮಗಳಲ್ಲೂ ವ್ಯಾಪಕ ಪ್ರಸಾರ ಮಾಡುವ

ವ್ಯವಸ್ಥೆ ಮಾಡಬಹುದು. ವಿಷಯದಲ್ಲಿ ಆಸಕ್ತಿಯುಳ್ಳವರೆಲ್ಲರೂ ಈ ಧಾರಾವಾಹಿಯನ್ನು ವೀಕ್ಷಿಸಲೇಬೇಕು. ಎಲ್ಲಾ ಚುನಾಯಿತ ಪ್ರತಿನಿಧಿಗಳು, ರಾಜಕೀಯ ಕಾರ್ಯಕರ್ತರು, ಮಾಧ್ಯಮ ಪ್ರತಿನಿಧಿಗಳು, ಶೈಕ್ಷಣಿಕ ತಜ್ಞರು ಹಾಗೂ ವಿದ್ಯಾರ್ಥಿಗಳು ಧಾರಾವಾಹಿಯನ್ನು ಅಗತ್ಯವಾಗಿ ವೀಕ್ಷಿಸಬೇಕು. ಕಡೆಯದಾಗಿ ಇದನ್ನು ಯು ಟ್ಯೂಬ್‌ನಲ್ಲೂ ಅಳವಡಿಸಿದರೆ, ವಿಶ್ವದೆಲ್ಲೆಡೆ ಇದನ್ನು ನೋಡುವ ಅವಕಾಶ ಲಭಿಸುತ್ತದೆ.

'ಪ್ರಧಾನ ಮಂತ್ರಿ' ಎಂಬ ಧಾರಾವಾಹಿಯನ್ನು ಖಾಸಗಿ ವಾಹಿನಿ ಪ್ರಸಾರಮಾಡುವಂತೆ, ಇತಿಹಾಸ ಪ್ರಸಾರಮಾಡುವ ವಾಹಿನಿಗಳಂತೆ ಡಿಜಿಟಲ್ ಮಾಧ್ಯಮದಿಂದ ಆಸಕ್ತರಲ್ಲಿ ಅರಿವು ಮೂಡಿಸುವ ಮಹತ್ವದ ಕಾರ್ಯಸಾಧನೆ ಸಾಧ್ಯ. 'ಪ್ರಧಾನ ಮಂತ್ರಿ' ಹಾಗೂ 'ಸಂವಿಧಾನ್' ಧಾರಾವಾಹಿಗಳು ಪ್ರೇಕ್ಷಕರನ್ನು ಆಕರ್ಷಿಸಿದರೆ, ಭಾರತದ ಇತಿಹಾಸ ವಾಹಿನಿಗಳಿಗೆ ನಾಂದಿ ಹಾಡಬಹುದು.

✶✶✶✶✶